## ಸಾಂದರ್ಭಿಕ ಲೇಖನ

'ಮೈಸೂರು ಅರಮನೆ ದೃಶ್ಯ ರಾಜಕಾರಣ', ಎಚ್.ಎ. ಅನಿಲ್‌ಕುಮಾರ್ ಅವರ ಮುಖಪುಟ ಲೇಖನ ಸಾಂದರ್ಭಿಕವಾಗಿದೆ. 'ದಸರಾ' ಹಬ್ಬದ ಮಹತ್ವ, ಹಬ್ಬದ ಆಚರಣೆ ಮಾಡಲು ಹೋಗಿದ್ದು, ಆನೆ ಅಂಬಾರಿ ತಯಾರಿ ಹೇಗೆ ಮಾಡುತ್ತಿದ್ದರು, 'ಅಂಬಾರಿ' ಲಾಂಛನ, ಗೊಂಬೆಗಳನ್ನು ಕೂರಿಸುವುದು..' ಮುಂತಾದ ವಿಚಾರಗಳ ಬಗ್ಗೆ ವಿವರವಾದ ಮಾಹಿತಿಗಳನ್ನು ಲೇಖನ ನೀಡಿತು. 'ಅರಮನೆ' ವಿಚಾರದಲ್ಲಿ 'ರಾಜಕಾರಣ' ಬೇಡ ಎಂಬ ಸದಾಶಯ ಇಷ್ಟವಾಯಿತು.

— ಪಿ. ಗೋವಿಂದರಾಜ್, ಶಿವಮೊಗ್ಗ

**'ಸಂಗ್ರಹಯೋಗ್ಯ'**

ಮುಖಪುಟ ಚಿತ್ರಲೇಖನ ಸುಂದರವಾಗಿದೆ. ಸಂಗ್ರಹಯೋಗ್ಯ ಸಂಚಿಕೆ.

— ಕೆ.ವಿ.ರಾಜಲಕ್ಷ್ಮಿ, ಬೆಂಗಳೂರು

**ಮಾಹಿತಿಪೂರ್ಣ**

'ನಿಮ್ಮೊಡನೆ'ಯಲ್ಲಿ 'ಪ್ಲಾಸ್ಟಿಕ್ ಮುಕ್ತ ಸನ್ನಿಹಿತ?' (ಸುಧಾ ಹೆಗಡೆ) ಬರಹದಲ್ಲಿ ಪ್ಲಾಸ್ಟಿಕ್ ಸಾಧಕ, ಬಾಧಕಗಳನ್ನು ಸೂಕ್ಷ್ಮವಾಗಿ, ಅಂಕಿ ಅಂಶಗಳಿಂದ ವಿವರಿಸಿದ್ದು ಮಾಹಿತಿಪೂರ್ಣವಾಗಿದೆ.

—ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ, ಜಿ.ಎಸ್. ಮೋಹನ್‌ಕುಮಾರ್, ವಾಷಿಂಗ್ಟನ್

**ತಿಳಿವಳಿಕೆ ಅಗತ್ಯ**

ಪ್ಲಾಸ್ಟಿಕ್ ಎಂಬುದು ಇಂದು ಪೆಡಂಭೂತವಾಗಿ ಬೆಳೆದು ನಿಂತಿದೆ. ಸರಕಾರ ಜಾರಿಗೆ ತಂದ ಪ್ಲಾಸ್ಟಿಕ್ ನಿಷೇಧ ಕಾನೂನಿನ ಅರಿವಿನ ಜೊತೆಗೆ ಪ್ಲಾಸ್ಟಿಕ್ ನಿರಂತರ ಬಳಕೆಯಿಂದ ಪರಿಸರದ ಮೇಲೆ, ಆರೋಗ್ಯದ ಮೇಲೆ ಆಗುವ ದುಷ್ಪರಿಣಾಮದ ಕುರಿತು ಜನರಲ್ಲಿ ಇನ್ನೂ ಗಾಢವಾಗಿ ತಿಳಿವಳಿಕೆ ಮೂಡಿಸುವ ಪ್ರಯತ್ನ ಮಾಡಬೇಕಾಗಿದೆ.

— ಅರವಿಂದ ಜಿ.ಜೋಷಿ, ಮೈಸೂರು

**ಹೃದಯ ಕಾಳಜಿ**

'ಆರೋಗ್ಯ ಅಂಕಣ'ದಲ್ಲಿ 'ಹೃದಯಾಘಾತ ಯುವ ಜನರಲ್ಲೇ ಹೆಚ್ಚು!' (ಉಮಾ ಅನಂತ್) ಲೇಖನ ಹೃದಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸುವಂತೆ ಪ್ರೇರೇಪಿಸಿತು. ವೇಗದ ಬದುಕು, ಜೀವನ ಶೈಲಿಯ ಬದಲಾವಣೆ, ವ್ಯಾಯಾಮ, ದೈಹಿಕ ಶ್ರಮದ ಕೊರತೆ, ಮಧುಮೇಹ, ಅತಿ ತೂಕ ಮುಂತಾದವು ಹೃದಯಾಘಾತಕ್ಕೆ ಕಾರಣವಾಗಿದ್ದು ಉತ್ತಮ ಆರೋಗ್ಯ ಕಾಪಾಡಿಕೊಂಡು ಹೃದಯ ತೊಂದರೆ ಗಳಿಂದ ಪಾರಾಗಬೇಕಾದ ಮುನ್ನೆಚ್ಚರಿಕೆಯ ಬಗ್ಗೆ ತಿಳಿಸಿತು.

—ವಿ. ಹೇಮಂತಕುಮಾರ, ಬೆಂಗಳೂರು

**ವ್ಯವಸ್ಥಿತ ನಿರ್ವಹಣೆ ಇರಲಿ**

ಸುಮಾರು 40 ವಯಸ್ಸಿನ ಆಸುಪಾಸಿನ ಯುವಜನ ರಲ್ಲೇ ಹೆಚ್ಚಾಗಿದೆ. ಹೌದು, ಮುಂದುವರೆದ ದೇಶಗಳಲ್ಲಿ ಇದರ ಪೀಡೆ ಕಡಿಮೆ. ಅಲ್ಲಿರುವಂತೆ ವ್ಯವಸ್ಥಿತ ಆರೋಗ್ಯ ನಿರ್ವಹಣೆ ಇಲ್ಲಿಯೂ ಎಲ್ಲ ಹಂತಗಳಲ್ಲಿ ಇರಬೇಕು.

— ರಾಜಶೇಖರ ಹಾದಿಮನಿ, ಧಾರವಾಡ

**ರೋಮಾಂಚನವಾಯಿತು!**

'ಇಂಗ್ಲಿಷ್ ಕಡಲ್ಗಾಲುವೆ ಸೇರಿದ ಆನಂದಬಾಷ್ಪ' (ಲತಾ ಹೆಗಡೆ) ಲೇಖನ ಓದುತ್ತಿದ್ದಾಗ ಮೈ ರೋಮಾಂಚನವಾಯಿತು. ಸ್ಪರ್ಧೆಯಲ್ಲಿ ಅಡಚಣೆಗಳು ಅಡ್ಡಬಂದರೂ ಗುರಿ ಮುಟ್ಟಿದಾಗ ಆಗುವ ಅನುಭವ ಹೇಳಲು ಅಸಾಧ್ಯ.

—ಸೀತಾ ಕೇಶವ ಸಿಡ್ನಿ, ಬಿ.ಮನೋಹರ ಚಳ್ಳಕೆರೆ




**ಖುಷಿಕೊಟ್ಟಿತು**

'ಕನ್ನಡದ ರಂಗತುರುಬು; ಮರಾಠಿ ಮಲ್ಲಿಗೆ' (ಡಾ.ಮಲ್ಲಿಕಾರ್ಜುನ ಕುಂಬಾರ) ಲೇಖನ ಮಾಹಿತಿಪೂರ್ಣವಾಗಿತ್ತು. 200ಕ್ಕೂ ಮಿಕ್ಕಿ ಕನ್ನಡ ನಾಟಕಗಳನ್ನು ಪ್ರದರ್ಶಿಸಿ ಜನಮನ ಸೂರೆ ಗೊಂಡಿರುವ ಮರಾಠಿ ನೆಲದ ಸಾಂಸ್ಕೃತಿಕ, ಸಾಮಾಜಿಕ ಚಟುವಟಿಕೆಗಳನ್ನು ಪರಿಚಯಿಸಿದ ಬರಹ ಓದಿ ಶ್ರೀ ರೇಣುಕಾಚಾರ್ಯ ನಾಟ್ಯ ಸಂಘದ ನಾಟಕಗಳನ್ನು ನೋಡಿದಷ್ಟೇ ಖುಷಿಕೊಟ್ಟಿತು.

—ಪಿ. ಜಯವಂತ ಪೈ, ಕುಂದಾಪುರ

**ನಟಿ ಲಕ್ಷ್ಮೀ ಅಭಿನಂದನಾರ್ಹರು**

'ನಿವೃತ್ತಿಗೆ ಬೆನ್ನು ಮಾಡಿದ ಜೀವಂತಿಕೆ ತುಳುಕಿಸುವ ನಟಿ' (ವಿಶಾಖ ಎನ್.) ಲೇಖನ ಓದಿ ಬಹಳ ಸಂತೋಷವಾಯಿತು. ನಟಿ ಲಕ್ಷ್ಮೀ ಅವರಿಗೆ 'ರಾಜಕುಮಾರ್ ಸ್ಮಾರಕ ಪ್ರಶಸ್ತಿ' ದೊರೆತಿದ್ದು ಇನ್ನೂ ಸಂತಸದ ವಿಷಯ. ಅವರು ಅಭಿನಂದನಾ ರ್ಹರು. ಲಕ್ಷ್ಮೀ ಅಭಿನಯದ ಮೊದಲ ಕನ್ನಡ ಚಿತ್ರ 'ಗೋವಾದಲ್ಲಿ ಸಿಐಡಿ 999' ತೆರೆ ಕಂಡದ್ದು 1968ರಲ್ಲಿ. ಇದರಲ್ಲಿ ನಾಯಕ ರಾಜಕುಮಾರ್. ಲೇಖನದಲ್ಲಿ ಇದನ್ನು ಸ್ಮರಿಸಬೇಕಾಗಿತ್ತು. ಅಲ್ಲದೆ ಲಕ್ಷ್ಮೀ ಅಭಿನಯದ ಎರಡನೆಯ ಕನ್ನಡ ಚಿತ್ರ 'ನಾ ನಿನ್ನ ಮರೆಯಲಾರೆ' (1977)ರಲ್ಲಿ ರಾಜ್ ಕುಮಾರ್ ನಾಯಕರಾಗಿದ್ದರು.

—ಮುಕುಂದ ಹೆರಕಲ್ಲ, ಕಲಬುರ್ಗಿ

**'ಜಾಜಿಮಲ್ಲಿಗೆ' ಸೌಂದರ್ಯ**

'ಸೌಂದರ್ಯ' ಪುಟದಲ್ಲಿ 'ಘಮ ಘಮ ಜಾಜಿ, ಸೌಂದರ್ಯದ ನಿಧಿ' (ಪ. ರಾಮಕೃಷ್ಣ ಶಾಸ್ತ್ರಿ) ಲೇಖನ ಮಹಿಳೆಯರಿಗೆ ದೊರೆತ ಮಾಹಿತಿ ನಿಧಿಯೆನಿಸಿದೆ.

—ಪ್ರಾರ್ಥನಾ ಹೇಮಂತಕುಮಾರ, ಬೆಂಗಳೂರು

**ಪ್ರಶಸ್ತಿ ಪುಟ ತೆರೆದು..**

ಲೇಖನ ಲಕ್ಷ್ಮೀ ಅವರ ಎಲ್ಲ ನಟನಾ ಕೌಶಲ್ಯಗಳ ಅನಾವರಣ ಮಾಡಿತ್ತು. ವಿವಿಧ ಭಂಗಿಗಳಲ್ಲಿ ರೂಪುಗೊಳ್ಳುವ ಎಲ್ಲ ಪಾತ್ರಗಳಿಗೂ ಜೀವ ತುಂಬುವ ಪರಿಪೂರ್ಣ ನಟಿ ಲಕ್ಷ್ಮೀ. ನಮ್ಮ ಮನೆಯ ಹೆಣ್ಣು ಮಗಳೇ ಎನ್ನುವಷ್ಟು ಸಲೀಸಾಗಿ ಆಕೆಯ ಅಭಿನಯ. ಡಾ. ರಾಜ್‌ಕುಮಾರ್ ಪ್ರಶಸ್ತಿಗೆ ಭಾಜನರಾಗಿರುವ ಲಕ್ಷ್ಮೀ ಅಭಿನಂದನಾರ್ಹರು.

—ಎಚ್. ಆನಂದಕುಮಾರ್, ಚಿತ್ರದುರ್ಗ, ಸುಂದರ್, ಬೆಂಗಳೂರು

**ಎಡಚರರು ಇನ್ನೂ ಇದ್ದಾರೆ..**

'ಎಡಚರ ಮ್ಯೂಸಿಯಂ' (ಎಚ್.ಎಸ್. ನವೀನ್ ಕುಮಾರ್ ಹೊಸದುರ್ಗ) ಲೇಖನ ಸ್ವಾರಸ್ಯಕರ ವಾಗಿದೆ. ವೈಜ್ಞಾನಿಕವಾಗಿ ಹೇಳುವುದಾದರೆ, ಮೆದುಳಿನ ಬಲಭಾಗ (ಹೆಮಿಸ್ಪಿಯರ್) ಮೇಲುಗೈ ಪಡೆದುಕೊಂಡವರು ಎಡಚರೂ, ಎಡಭಾಗ ಮೇಲುಗೈ ಇರುವವರು ಬಲಚರೆಂದು ಹೇಳ ಬಹುದು. ಕೆಲವು ಖ್ಯಾತ ಟೆನಿಸ್ ಆಟಗಾರರು ಸಹ ಎಡಚರಾಗಿದ್ದರು. ಕನ್ನಡದ ಮೇರು ನಟ ವಿಷ್ಣುವರ್ಧನ್ ಸಹ ಈ ಗುಂಪಿಗೆ ಸೇರುತ್ತಾರೆ.

—ಡಾ. ಕೆ.ಕೆ. ಜಯಚಂದ್ರ ಗುಪ್ತ, ಹಾಸನ

**ಎಡಗೈ ಹಸ್ತರೇಖೆ**

'ಎಡಚರ ಮ್ಯೂಸಿಯಂ' ಲೇಖನ ಚೆನ್ನಾಗಿದೆ. ಎಡಗೈ ಅಶುಭವೆನ್ನುವುದಾದರೆ 'ವಧು ಪರೀಕ್ಷೆ ಶುಭ ಲಕ್ಷಣಗಳಿಗಾಗಿ ಮೊದಲು ನೋಡುವುದು ಕನ್ಯೆಯ ಎಡಗೈ ಹಸ್ತರೇಖೆಗಳನ್ನೆಂಬುದನ್ನು ಮರೆಯ ಬಾರದು. ಎಡಚರರಾದ ಖ್ಯಾತನಾಮರ ಹೆಸರು ಗಳೆಲ್ಲ ಲೇಖನದಲ್ಲಿ ಪ್ರಸ್ತಾಪವಾಗಿದೆ. ಇಂಥ ವಿಶ್ವ ಪ್ರಸಿದ್ಧ 'ಎಡಚರ ಮ್ಯೂಸಿಯಂ' ಸ್ಥಾಪಿಸಿದ ಸಂದೀಪ ವಿಷ್ಣೋಯ್ ಅವರನ್ನು ಮರೆತರೆ ಹೇಗೆ?

—ಕೊಹಿಮ, ಬಸರಕೋಡು

**ತನುಶ್ರೀ ಮನದಳಲು**

'ಸೆಲೆಬ್ರಿಟಿ' ಅಂಕಣದಲ್ಲಿ 'ತನುವು ನನ್ನದು ಮನವು ನನ್ನದು' (ಹನಿ) ರೂಪದರ್ಶಿ ಕಂ ನಟಿಯಾಗಿ ಮಿಂಚಿದ ತನುಶ್ರೀ ಹತ್ತು ವರ್ಷಗಳ ಹಿಂದಿನ ಪ್ರಕರಣಕ್ಕೆ 'Me Too' ನೆಪದಲ್ಲಿ ಮತ್ತೆ ಕೆದಕಲು ಪ್ರಯತ್ನಿಸುತ್ತಿದ್ದಾರೆ.

ಸನಾತನ ಹಿಂದೂ ಧರ್ಮ ವನ್ನು ನಿರಂತರ ತೆಗಳುವ ತನುಶ್ರೀ ಮನಃಶಾಂತಿಗಾಗಿ ಕೆಲಕಾಲ ಬೌದ್ಧ ಧರ್ಮವನ್ನು ಸ್ವೀಕರಿಸಿ, ಈಗ ಮತ್ತೆ ಕ್ರೈಸ್ತರಾಗಿ ಮತಾಂತರ ಹೊಂದಿದ್ದಾರೆ. ಚರ್ಚ್ ಗಳಲ್ಲಿ ಸ್ತ್ರೀ ಸನ್ಯಾಸಿನಿಯರ ಮೇಲೆ ನಡೆಯುವ ಲೈಂಗಿಕ ಶೋಷಣೆಯ ವಿರುದ್ಧ ಧರ್ಮ ಗುರುಗಳ ವಿರುದ್ಧ ತನುಶ್ರೀ ಏಕೆ ಬಾಯಿ ಬಿಡುತ್ತಿಲ್ಲ? ಎಂಬುದು ಅನೇಕರ ಪ್ರಶ್ನೆ.

—ಶೋಭಾ ಮುಕುಂದ, ಕಲಬುರ್ಗಿ

**ಒತ್ತಿನೆಣೆ ಚಿತ್ರ ತಪ್ಪಾಗಿದೆ**

'ಒತ್ತಿನೆಣೆ ಅಂದಕ್ಕಿಲ್ಲ ಎಣೆ!' (ಡಾ.ಎನ್. ಸ್ವಾತಿ ಉಡುಪಿ) ಅಕ್ಟೋಬರ್ 4 ರ ಸಂಚಿಕೆಯಲ್ಲಿ ಪ್ರಕಟವಾದ ಚಿತ್ರಲೇಖನದಲ್ಲಿ ಪ್ರಮುಖ ಛಾಯಾಚಿತ್ರ ಒತ್ತಿನೆಣೆ ಸಮುದ್ರತೀರದ್ದು ಅಲ್ಲವೇ ಅಲ್ಲ. ಆ ಚಿತ್ರ ಉತ್ತರ ಕನ್ನಡದ ಮುರುಡೇಶ್ವರದ ಮೀನುಗಾರಿಕಾ ಸಮುದ್ರತೀರದ ಚಿತ್ರ.

— ಜೋಯ್ ಜೆ. ಕರ್ವಾಲೋ ಕುಂದಾಪುರ